





# ಬೆಳಕಿನ ಚಿತ್ತಾರ

**ಬೆ**ಳಕಿನ ಹಬ್ಬ ದೀಪಾವಳಿ. ಮನೆಯೊಳಗೆ ದೊಡ್ಡವರು ದೀಪ ಬೆಳಗಿದರೆ, ಹೊರಗೆ ಮಕ್ಕಳು ಪಟಾಕಿಯ ಮೂಲಕ ಬಾನಂಗಳದಲ್ಲಿ ಬೆಳಕಿನ ಚಿತ್ತಾರ ಮೂಡಿಸಿ ಸಂತಸಪಡುತ್ತಾರೆ. ದೀಪಾವಳಿಯ ದಿನಗಳಲ್ಲಿ ಬಹುತೇಕ ನಗರಗಳ ಬಾನು ರಾತ್ರಿ ಹನ್ನೊಂದರವರೆಗೂ ಬೆಡಗಿನ ಬೆಳಕಿನಲ್ಲಿ ಭೋರ್ಗರೆಯುತ್ತದೆ.

ಪಟಾಕಿ ಸಿಡಿಸುವಷ್ಟೇ ಖುಶಿ ಅದರ ವೀಕ್ಷಣೆಯಲ್ಲೂ ಇದೆ. ಬಾನಂಗಳದಲ್ಲಿ ರಾಕೆಟ್‌ಗಳು ವರ್ಣ ವೈವಿಧ್ಯದ ಆಕರ್ಷಕ ಭ್ರಮಾಲೋಕವನ್ನು ಸೃಷ್ಟಿಸಿ, ಮರೆ ಮಾಡಿ, ಮತ್ತೆ ಮತ್ತೆ ನೋಡುವ ಕುತೂಹಲ ಹುಟ್ಟಿಸಿಬಿಡುತ್ತವೆ. ಆಗಸದಲ್ಲಿನ ರಂಗೋಲಿಗಳ ಈ ಮಿಂಚಿನ ಸಂಚಾರವನ್ನು ಕ್ಯಾಮೆರಾ ಮೂಲಕ ನೋಡಲು ಎತ್ತರದ ಜಾಗ ಆಯ್ದುಕೊಳ್ಳಬೇಕು. ಕ್ಯಾಮರಾದಲ್ಲಿ ಸೆರೆಡಿಯಲು ಸ್ಟಾಂಡ್‌ನೊಂದಿಗೆ ಸಜ್ಜುಗೊಂಡಿರಬೇಕು. ಫೋಟೋ ಕ್ಲಿಕ್ಕಿಸಿ ನೋಡಿದಾಗಲೇ ನಮಗೆ ರಾಕೆಟ್ ಮೇಲೆ ಚಿಮ್ಮುವಾಗ ಮೂಡಿಸುವ ಬೆಂಕಿಯ ಕಣಗಳ ದಾರಿ ಗೋಚರಿಸುವುದು. ಇಲ್ಲಿದೆ ಅಂತಹ ಒಂದು ಪುಟ್ಟ ಪ್ರಯತ್ನ.

■ ಚಿತ್ರಬರಹ:

**ಗ.ಮ.ತುಂಬೆಮನೆ**